**ಅಸಲು ದಾವಾ ನಂಃ 117/2022**
**ಪಿ.ಡಬ್ಲ್ಯೂಃ 1 ,**

<u>ದಿನಾಂಕ :23-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು :- ಶ್ರೀ . ಎಸ್ .ಬಿ.ಪಿ. ಪ್ರತಿವಾದಿ ಪರ ವಕೀಲರಿಂದ :</u>

ನನ್ನ ತಾಯಿಗೆ ಅವರ ತಂದೆಯಿಂದ ಆಸ್ತಿ ಬಂದಿದೆ. ನನ್ನ ತಾಯಿಗೆ ಯಾವ ಯಾವ ಸರ್ವೆ ನಂಬರ ಬಂದಿವೆ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲಾ ಕಾರಣ ಹೇಳಲು ಆಗುವುದಿಲ್ಲಾ. ಈ ದಾವೆಯ ಸಂಗತಿಗಳನ್ನು ಮತ್ತು ಸರ್ವೆ ನಂಬರಗಳನ್ನು ನಾನೇ ಮಾಹಿತಿ ನೀಡಿದ್ದೇನೆ. ನಮ್ಮ ತಾಯಿಗೆ ಎಷ್ಟು ಎಕರೆ ಜಮೀನು ಬಂದಿದೆ ಎಂದು ನನಗೆ ಗೊತ್ತಿಲ್ಲಾ. ಸ.ನ. 318 ರಾಜೇಶ್ರೀ ಫ್ಯಾಕ್ಟರಿ ಹೋಗಿದೆ ಎಂದು ಈ ವಿಷಯ ನನ್ನ ತಾಯಿ ಜೀವಂತ ಇದ್ದಾಗ ಗೊತ್ತಿದೆ. ಈ ದಾವೆಗೆ ರಾಜೇಶ್ರೀ ಫ್ಯಾಕ್ಟರಿಯವರನ್ನು ಪಕ್ಷಗಾರನ್ನಾಗಿ ಮಾಡಿಲ್ಲಾ ಎಂದರೆ ಗೊತ್ತಿಲ್ಲಾ. ಸ.ನ. 86/4 ಮತ್ತು 87/3 ಈ ಜಮೀನು ಓರಿಯಂಟ್ ಫ್ಯಾಕ್ಟರಿಗೆ ಹೋಗಿವೆ ಅವರನ್ನು ಸಹ ಪಕ್ಷಗಾರನನ್ನಾಗಿ ಮಾಡಿಲ್ಲಾ. ಈ ಮೇಲೆ ಜಮೀನುಗಳು ಫ್ಯಾಕ್ಟರಿಗಳಿಗೆ ಹೋಗಿದೆ ಎಂದು ವಿಷಯ ಗೊತ್ತು. ನಮ್ಮ ತಾಯಿಗೆ ಇನ್ನೊಂದು ಸ.ನ. 125, 3 ಎಕರೆ 17 ಗುಂಟೆ ಜಮೀನು ಇದೆ ಎಂದರೆ ಸರಿ. ನಮ್ಮ ಸಹೋದರರು ಚಿಕ್ಕವರಿನಿಂದ ಊರಲ್ಲಿ ವಾಸ ಇಲ್ಲಾ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮದುವೆ ಆಗಿ ಚಿಂಚೋಳಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಮ್ಮ ಎಲ್ಲಾ ಜಮೀನನ್ನು ನಮ್ಮ ತಾಯಿ ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ.

ಎಲ್ಲಾ ಜಮೀನುಗಳು ನಮ್ಮ ತಾಯಿಯವರ ಹೆಸರಿನಲ್ಲಿ ಇದ್ದ ಕಾರಣ ಫ್ಯಾಕ್ಟರಿಗೆ ಮಾರಾಟ ಮಾಡಿ ಬಂದ ಹಣವನ್ನು ನಮ್ಮ ತಾಯಿಯ ಖಾತೆಯಲ್ಲಿದೆ ಎಂದರೆ ಸರಿ. ನಮ್ಮ ತಾಯಿಗೆ ಮಾರಾಟ ಮಾಡಿದ ಬಂದ ಹಣದಿಂದ ದಿಗ್ಗಾಂವ ಗ್ರಾಮದಲ್ಲಿ ಎಂಟು ಆರ್ ಆರ್ ಸಿ ಮನೆಗಳು ಇವೆ ಎಂದರೆ ಸರಿ. ಅದೇ ಹಣದಿಂದ ನಮ್ಮ ತಾಯಿ 11 ಎಕರೆ ಜಮೀನು ಖರಿಸಿದ್ದಾರೆ ಎಂದರೆ ಸರಿ. ಉಳಿದ ಹಣದಲ್ಲಿ ನನಗೆ ರೂ. 2 ಲಕ್ಷ ಹಣ ನೀಡಿದ್ದಾರ ಎಂದರೆ ಸರಿಯಲ್ಲ. ನಮ್ಮ ಸಹೋದರಿಗೂ ಸಹ 2 ಲಕ್ಷ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ಹಣದ ಜೊತೆಗೆ ನನಗೆ 2 ತೊಲೆ ಬಂಗಾರ ನೀಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮರಣ ಹೊಂದಿದ ನಂತರ ಅವರ ಬಳಿ ಇದ್ದ 4 ತೊಲೆ ಬಂಗಾರವನ್ನು ನನ್ನ ಸಹೋದರರು ನನಗೆ ನೀಡಿದ್ದಾರೆ

**ಅಸಲು ದಾವಾ ನಂಃ 117/2022**
**ಪಿ.ಡಬ್ಲ್ಯೂಃ 1 ,**

ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಬೋರಮಳ ಅರ್ಧ ತೊಲೆ , ಜೇರಮಣಿ ಅರ್ಧ ತೊಲೆ ಬಂಗಾರ ನೀಡಿದ್ದಾರೆ ಎಂದು ನುಡಿಯುತ್ತಾರೆ.

ಸ.ನ. 125 ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ . ನನ್ನ ತಾಯಿ ಜೀವಂತ ಇರುವ ಕಾಲಕ್ಕೆ ನನಗೆ ಸ.ನ. 125 ಮತ್ತು 2 ಲಕ್ಷ ಹಣ ಮತ್ತು 6 ತೊಲೆ ಬಂಗಾರ ನೀಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ಜೀವಂತ ಇರುವ ಕಾಲಕ್ಕೆ ನನಗೆ ಸ.ನ. 125 ಕೊಟ್ಟಿದ್ದು ಅದನ್ನು ನಾನು ಲೀಜ್ ಮೇಲೆ ನೀಡಿ ನಾನು ಮುಂಬೈ ಇಂದ ಬಂದು ಹಣ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ . ನನ್ನ ತಾಯಿಯವರು ಜೀವಂತ ಇರುವ ಕಾಲಕ್ಕೆ ಪಾಲು ಮಾಡಿ ಸ.ನ. 125, 3 ಎಕರೆ 17 ಗುಂಟೆ ಜಮೀನು ನನಗೆ ಕೊಟ್ಟಿದ್ದು ಆ ಪ್ರಕಾರ ನನ್ನ ಹೆಸರು ಪಹಣಿಯಲ್ಲಿ ಇದೆ ಎಂದರೆ ಸರಿಯಲ್ಲ. ನಮ್ಮ ತಾಯಿವರು ಖರಿದಿ ಮಾಡಿದ 11 ಎಕರೆ ಜಮೀನದಲ್ಲಿ 1 ನೇ ಪ್ರತಿವಾದಿ 5.20 ಎಕರೆ ಮತ್ತು 2 ನೇ ಪ್ರತಿವಾದಿ 5.20 ಎಕರೆ ನೀಡಿ ನನಗೆ ಸ.ನ. 125 ನೀಡಿದ್ದಾರೆ ಎಂದರೆ ಸರಿಯಲ್ಲ . ಪ್ರತಿವಾದಿ ನಂ-1 ಮತ್ತು 2 ಅವರು ನನಗೆ ನೀಡಿದ ಸ.ನ. 125 ನ್ನು ಬಿಟ್ಟು ಅವರ ಮಧ್ಯ ನೊಂದಾಯಿತ ಪಾಲು ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ . ಸದರಿ ನೊಂದಾಯಿತ ಪಾಲು ಪತ್ರವನ್ನು ನಾನು ಪ್ರಶ್ನೆ ಮಾಡಿಲ್ಲಾ ಎಂದರೆ ಗೊತ್ತಿಲ್ಲಾ

**( ಈ ಹಂತದಲ್ಲಿ ಪ್ರತಿವಾದಿ ಪರ ವಕೀರಲು ಹೆಚ್ಚಿನ ಪಾಟಿ ಸವಾಲು ಮಾಡಲು ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.